# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ದೂರವಾಣಿ ಸಂಖ್ಯೆ: 080-22212343
ಫ್ಯಾಕ್ಸ್ ಸಂಖ್ಯೆ: 080-22278803
ಅಂತರ್ಜಾಲ: www.kptcl.com
ಇ-ಮೇಲ್ ವಿಳಾಸ: director.ahr.kptcl@gmail.com

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್): ಯು40109ಕೆಎ1999ಎಸ್‌ಜಿಸಿ025521
ಅಧಿಕೃತ ಕಛೇರಿ ವಿಳಾಸ : ನಿಗಮ ಕಾರ್ಯಾಲಯ, ಕಾವೇರಿಭವನ, ಕೆ.ಜಿ.ರಸ್ತೆ, ಬೆಂಗಳೂರು-560 009

ಓದಲಾಗಿದೆ:-

ನಿಗಮದ ಅನುಮೋದಿತ ಟಿಪ್ಪಣಿ ದಿನಾಂಕ: 19.08.2020.

ಪೀಠಿಕೆ:-

ಕವಿಪ್ರನಿನಿ ಸಂಸ್ಥೆಯು ತಾಂತ್ರಿಕ ಆಧಾರಿತ ಸಂಸ್ಥೆಯಾಗಿದ್ದು, ನಿಗಮ ಕಾರ್ಯಾಲಯವು ಹೊಂದಿದಂತೆ ರಾಜ್ಯ ವ್ಯಾಪ್ತಿಯಲ್ಲಿ ಅಧೀನ ಕಛೇರಿಗಳನ್ನು ಹೊಂದಿದ್ದು, ಆಡಳಿತಾತ್ಮಕ, ತಾಂತ್ರಿಕ ಹಾಗೂ ಲೆಕ್ಕ ಪತ್ರ/ಸಿಬ್ಬಂದಿ ಶಾಖೆಗಳಲ್ಲಿನ ತುರ್ತು ಕಾರ್ಯ ನಿರ್ವಹಣೆಗಾಗಿ ನಿರ್ದಿಷ್ಟ ಕೆಲಸಕ್ಕೆ ಹಾಗೂ ನಿರ್ಧಿಷ್ಟ ಅವಧಿಗೆ ಹೊರಗಿನ ಏಜೆನ್ಸಿ ಮೂಲಕ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸಲು ಡಾಟಾ ಎಂಟ್ರಿ ಆಪರೇಟರ್‌ಗಳು, ಕಛೇರಿ ಪರಿಚಾರಕ ಹಾಗೂ ನಿಗಮ ಕಾರ್ಯಾಲಯಕ್ಕೆ ಓರ್ವ ಸ್ವಾಗತಕಾರಿಣಿ ಸೇವೆಗಳನ್ನು ಪಡೆಯಲಾಗಿದ್ದು, ಇಂತಹ ಹೊರಗುತ್ತಿಗೆ ಕೆಲಸಗಾರರಿಗೆ ಕನಿಷ್ಟ ವೇತನ ಕಾಯ್ದೆಯನ್ವಯ ಕಾಲಕಾಲಕ್ಕೆ ಅನ್ವಯವಾಗತಕ್ಕ ಮಾಸಿಕ ಮಜೂರಿಯನ್ನು ಪಾವತಿಸಲಾಗುತ್ತಿದೆ. ಪ್ರಸ್ತುತ, ಸದರಿ ಕೆಲಸಗಾರರ ಸಮಯ ನಿಷ್ಠೆ ಹಾಗೂ ಕರ್ತವ್ಯ ದಕ್ಷತೆಯನ್ನು ಉತ್ತೇಜಿಸುವ ದೃಷ್ಟಿಯಿಂದ ಗೌರಿ-ಗಣೇಶ ಹಬ್ಬದ ಪ್ರಯುಕ್ತ 'ಪ್ರೋತ್ಸಾಹಧನ'ವನ್ನು (Incentive) ಪಾವತಿಸಲು ನಿರ್ಧರಿಸಲಾಗಿರುವುದರಿಂದ ಈ ಕೆಳಗಿನಂತೆ ಆದೇಶಿಸಿದೆ.

ಆದೇಶ ಸಂಖ್ಯೆ: ಕವಿಪ್ರನಿನಿ/ಔಬಾ/ಬಿ14/4957/2008-09

ಬೆಂಗಳೂರು, ದಿನಾಂಕ: 21 AUG 2020

ಕ.ವಿ.ಪ್ರ.ನಿ.ನಿ. ನಿಗಮ ಕಾರ್ಯಾಲಯ, ವಲಯ ಕಛೇರಿಗಳು ಹಾಗೂ ಇತರೆ ಅಧೀನ ಕಛೇರಿಗಳಲ್ಲಿ ಹೊರ ಗುತ್ತಿಗೆ ಆಧಾರದ ಮೇಲೆ ಕನಿಷ್ಟ ಒಂದು ವರ್ಷ ಸೇವೆ ಪೂರೈಸಿರುವ ಎಲ್ಲಾ ಡಾಟಾ ಎಂಟ್ರಿ ಆಪರೇಟರ್‌ಗಳು, ಕಛೇರಿ ಪರಿಚಾರಕರು ಹಾಗೂ ನಿಗಮ ಕಾರ್ಯಾಲಯದ ಸ್ವಾಗತಕಾರಿಣಿಗೆ ದಿನಾಂಕ: 22.08.2020 ರಂದು ಆಚರಿಸಲ್ಪಡುವ ಗೌರಿ-ಗಣೇಶ ಹಬ್ಬದ ಪ್ರಯುಕ್ತ 'ಪ್ರೋತ್ಸಾಹಧನ'ವಾಗಿ (Incentive) ಪಾವತಿಸಲು ರೂ.1,000/-+GST ಅನ್ನು (ರೂ. ಒಂದು ಸಾವಿರ ಮತ್ತು ಜಿ.ಎಸ್.ಟಿ ಸೇರಿಸಿ ಒಟ್ಟು 1180/-) ಹೊರಗುತ್ತಿಗೆ ಆಧಾರದ ಮೇಲೆ ಸೇವೆಯನ್ನು ಒದಗಿಸಿರುವ ಏಜೆನ್ಸಿಯವರಿಗೆ ಮುಂಗಡವಾಗಿ ಪಾವತಿಸಲು ಅನುಮೋದನೆ ನೀಡಲಾಗಿದೆ. ಏಜೆನ್ಸಿಯವರು ಹೊರ ಗುತ್ತಿಗೆ ಕೆಲಸಗಾರರಿಗೆ ಪ್ರೋತ್ಸಾಹ ಧನವನ್ನು ಕೂಡಲೇ ಪಾವತಿಸಿ, ಪಾವತಿಸಿರುವ ಬಗ್ಗೆ ಪೂರಕ ದಾಖಲಾತಿಗಳನ್ನು ಸಂಬಂಧಿಸಿದ ವೇತನ ಬಟವಾಡೆ ಅಧಿಕಾರಿಗಳಿಗೆ ಸಲ್ಲಿಸತಕ್ಕದ್ದು. ಏಜೆನ್ಸಿಯವರು ಈ ಬಗ್ಗೆ ಪಾವತಿಸಿ ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಿದ ನಂತರ ಏಜೆನ್ಸಿಯವರ ಮುಂದಿನ ಬಿಲ್ಲುಗಳನ್ನು ಅನುಮೋದಿಸತಕ್ಕದ್ದು.

{ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಕವಿಪ್ರನಿನಿ
ರವರಿಂದ ಅನುಮೋದಿಸಲ್ಪಟ್ಟಿದೆ }

21/8/2020
ನಿರ್ದೇಶಕರು (ಆ ಮತ್ತು ಮಾಸಂ)
ಕವಿಪ್ರನಿನಿ.

ಪ್ರತಿಗಳು:

1. ನಿರ್ದೇಶಕರು (ಆಡಳಿತ), ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ, 2ನೇ ಮಹಡಿ, ಟಿ.ಟಿ.ಎಂ.ಸಿ 'ಎ' ಬ್ಲಾಕ್, ಬಿ.ಎಂ.ಟಿ.ಸಿ, ಕಾಂಪ್ಲೆಕ್ಸ್, ಶಾಂತಿನಗರ, ಕೆ.ಹೆಚ್.ರೋಡ್, ಬೆಂಗಳೂರು-27 ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
2. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ.

-2-

3. ಎಲ್ಲಾ ಮುಖ್ಯ ಇಂಜಿನಿಯರ್(ವಿ), ಕವಿಪ್ರನಿನಿ.
4. ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು (ಪ್ರಸರಣ) / ನಿರ್ದೇಶಕರು (ಹಣಕಾಸು) /ನಿರ್ದೇಶಕರು (ಆ.ಮತ್ತು ಮಾ.ಸಂ)/ ನಿರ್ದೇಶಕರು ಕಂಪನಿ ಕಾರ್ಯದರ್ಶಿಗಳು, ಕವಿಪ್ರನಿನಿ ಇವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳು, ಬೆಂಗಳೂರು.

ಪ್ರತಿಯನ್ನು ಈ ಕೆಳಕಂಡವರ ಅಗತ್ಯ ಕ್ರಮಕ್ಕಾಗಿ **www.kptcl.com/eprasarana** ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

1. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ)/ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ.
2. ಎಲ್ಲಾ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ)/ಉಪ ಲೆಕ್ಕ ನಿಯಂತ್ರಣಾಧಿಕಾರಿ, ಕವಿಪ್ರನಿನಿ.
3. ಎಲ್ಲಾ ಲೆಕ್ಕಾಧಿಕಾರಿ (ಆಂ. ಪ.), ಕವಿಪ್ರನಿನಿ.
4. ಕ್ರೋಢೀಕರಣ ಘಟಕ, ಕವಿಪ್ರನಿನಿ, ಕಾವೇರಿಭವನ, ಬೆಂಗಳೂರು.